APRIL 16, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಬೀದರ, ಕಲಬುರ್ಗಿ, ಯಾದಗಿರಿ, ರಾಯಚೂರು,** ವಿಜಯಪುರ, ಬಾಗಲಕೋಟೆ, ಕೊಪ್ಪಳ, ಗದಗ, ಉತ್ತರಕನ್ನಡ, ದಕ್ಷಿಣಕನ್ನಡ, ಉಡುಪಿ, ಕೊಡಗು ಜಿಲ್ಲೆಗಳಲ್ಲಿ, ಹೀಟ್ ವೇವ್ಸ್ ಹಿನ್ನೆಲೆ, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮುಂಬರುವ ನಾಲ್ಕು ದಿನ, 12 ಜಿಲ್ಲೆಗಳಲ್ಲಿ, ಬಿಸಿಗಾಳಿ ಬೀಸಲಿದೆ. 44 ರಿಂದ 45 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಬಹುದು ಎಂದು, ಬೆಂಗಳೂರು ಹವಾಮಾನ ಕೇಂದ್ರದ ಹಿರಿಯ ವಿಜ್ಞಾನಿ, ಸಿ.ಎಸ್. ಪಾಟೀಲ, ಆಕಾಶವಾಣಿಗೆ ತಿಳಿಸಿದ್ದಾರೆ. ವಿಶೇಷವಾಗಿ 12 ಜಿಲ್ಲೆಗಳ ಜನತೆ, ತಮ್ಮ ಆರೋಗ್ಯದ ಕಾಳಜಿ ಹಾಗೂ ಬಿಸಿಲಿನ ಪ್ರಖರತೆ ಹಿನ್ನೆಲೆ, ಮುಂಜಾಗ್ರತೆ ವಹಿಸುವಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೋರಿದೆ.

<><><>

**ಪಂಪ ಪ್ರಶಸ್ತಿಗೆ, ಹಿರಿಯ ಸಾಹಿತಿ ದೇವನೂರು** ಮಹಾದೇವ, ಬಿ.ವಿ. ಕಾರಂತ ಪುರಸ್ಕಾರಕ್ಕೆ, ಹಿರಿಯ ರಂಗಕರ್ಮಿ ಪ್ರಸನ್ನ ಹಾಗೂ ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿಗೆ ಪ್ರೊಫೆಸರ್ ಎಸ್.ಜಿ. ಸಿದ್ದರಾಮಯ್ಯ ಆಯ್ಕೆಯಾಗಿದ್ದಾರೆ. ಬಸವ ರಾಷ್ಟ್ರೀಯ ಪ್ರಶಸ್ತಿಗೆ ಬೀದರ ಜಿಲ್ಲೆಯ, ಬೆಲ್ದಾಳ ಸಿದ್ಧರಾಮ ಶರಣರು, ಶ್ರೀ ಭಗವಾನ ಮಹಾವೀರ, ಶಾಂತಿ ರಾಷ್ಟ್ರೀಯ ಪುರಸ್ಕಾರಕ್ಕೆ, ಮಂಡ್ಯ ಜಿಲ್ಲೆ, ಕಂಬದಳ್ಳಿಯ, ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಭಾಜನರಾಗಿದ್ದಾರೆ.

<><><>

**ಬಿ.ವಿ. ಕಾರಂತ ಪುರಸ್ಕಾರಕ್ಕೆ ಆಯ್ಕೆಯಾಗಿರುವ,** ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಹೆಗ್ಗೋಡು ಬಳಿಯ, ಭೀಮನಕೋಣೆಯ, ಹಿರಿಯ ರಂಗಕರ್ಮಿ ಪ್ರಸನ್ನ ಅವರು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಹಿರಿಯ ರಂಗಕರ್ಮಿ ಪ್ರಸನ್ನ ಧ್ವನಿ 45 ಸೆಕೆಂದುಗಳು

<><><>

**ಹರಿಯಾಣಾದ ಗುಡಗಾಂವ್ ಕನ್ನಡ ಸಂಘ,** ಜಾನಪದ ಕ್ಷೇತ್ರದಲ್ಲಿ ಸಾಧನೆಗೈದ, ಕೋಲಾರ ಜಿಲ್ಲೆ, ಸುಗಟೂರು ಗ್ರಾಮದ ಜಾನಪದ ಕಲಾವಿದ, ಗೋ.ನಾ.ಸ್ವಾಮಿ ಅವರನ್ನು, 'ಜಾನಪದ ರತ್ನ' ಪ್ರಶಸ್ತಿಗೆ, ಆಯ್ಕೆ ಮಾಡಿದೆ.

<><><>

**ವಿಜಯನಗರ ಜಿಲ್ಲೆ, ತುಂಗಭದ್ರಾ** ಜಲಾಶಯದ, ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ, ಮೇ 15ರೊಳಗೆ ಪೂರ್ಣಗೊಳ್ಳಲಿದೆ ಎಂದು, ಕ್ರಸ್ಟ್ ಗೇಟ್ ಅಳವಡಿಕೆ ತಜ್ಞ, ಕನ್ನಯ್ಯ ನಾಯ್ಡು, ಹೊಸಪೇಟೆಯಲ್ಲಿ ತಿಳಿಸಿದ್ದಾರೆ. ಈ ತಿಂಗಳಾಂತ್ಯದಲ್ಲಿ, ಅಳವಡಿಕೆ ಕಾರ್ಯ ಪೂರ್ಣಗೊಳ್ಳಲಿದೆ. ನಂತರ ಪ್ರಾಯೋಗಿಕ ಪರೀಕ್ಷೆ ನಡೆಯಲಿದೆ ಎಂದರು.

<><><>

**ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ,** ವಿದ್ಯುನ್ಮಾನ ಮತಯಂತ್ರಗಳ ಬದಲಿಗೆ, ಮತಪತ್ರ – ಬ್ಯಾಲೆಟ್ ಬಳಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರ ರೂಪಿಸಿದ್ದ ಮಸೂದೆಗೆ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ, ಅಂಕಿತ ಹಾಕಿದ್ದಾರೆ. ಸಂವಿಧಾನದ, 326ನೇ ವಿಧಿ ಅಡಿ, ಮುಕ್ತ, ನ್ಯಾಯಸಮ್ಮತ ಹಾಗೂ ಪಾರದರ್ಶಕ ಚುನಾವಣೆಗಳನ್ನು ನಡೆಸಲು, ಮತಪತ್ರದ ಗೋಪ್ಯತೆ ಕಾಪಾಡಲು, ಸುದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯ ಎಂದು, ತಿದ್ದುಪಡಿ ಮಸೂದೆಯಲ್ಲಿ, ರಾಜ್ಯ ಸರ್ಕಾರ ಪ್ರಸ್ತಾಪಿಸಿತ್ತು.

<><><>

**ಧಾರವಾಡ ಜಿಲ್ಲೆ, ನವಲಗುಂದ ತಾಲೂಕಿನ,** ಬೆಣ್ಣಿ ಹಳ್ಳದ ಅಭಿವೃದ್ಧಿಗೆ, ಸಾವಿರದ 6 ನೂರಾ 86 ಕೋಟಿ ರೂಪಾಯಿ, ಅನುದಾನ ನೀಡುವಂತೆ, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾಗಿ, ನರಗುಂದ ಶಾಸಕ ಸಿ.ಸಿ. ಪಾಟೀಲ ತಿಳಿಸಿದ್ದಾರೆ. ನರಗುಂದ ತಾಲೂಕು, ಬನಹಟ್ಟಿ ಗ್ರಾಮದ ಹತ್ತಿರದಲ್ಲಿ, ಬೆಣ್ಣಿ ಹಳ್ಳದಿಂದ ಮೆಣಸಗಿ ಗ್ರಾಮದ ಮಲಪ್ರಭಾ ನದಿ ವರೆಗೆ, ಬೆಣ್ಣಿ ಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ ಚಾಲನೆ ನೀಡಿ, ಶಾಸಕರು ಮಾತನಾಡಿದರು. 38 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ, ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ** ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಶೋಧನಾ ಸಂಸ್ಥೆ ಹಾಗೂ ಆಸ್ಪತ್ರೆ – ಕೆ.ಎಂ.ಸಿ. ಆರ್.ಐ. ತಾಯಿ ಮತ್ತು ಮಗುವಿನ ಆರೈಕೆ ವಿಭಾಗಕ್ಕೆ, ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಸೆಂಟ್ರಲ್, ಮಹಿಳಾ ವಿಭಾಗ, 50 ಲಕ್ಷ ರೂಪಾಯಿ ಮೌಲ್ಯದ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರ ನೀಡಿದೆ ಎಂದು, ರೋಟರಿ ಕ್ಲಬ್, ನಿಕಟಪೂರ್ವ ಅಧ್ಯಕ್ಷೆ ರೀಟಾ ಹಂಡಾ, ಮಾಹಿತಿ ನೀಡಿದ್ದಾರೆ.

**ಹರ್ಷ/ಪ್ರಕಟಣೆ**

<><><>

**'ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ** ತಿದ್ದುಪಡಿ ಮಸೂದೆ –2026ರ' ವಿರುದ್ಧ, ಕರ್ನಾಟಕದ ಆರು ಜನ ಲಿಂಗತ್ವ ಅಲ್ಪಸಂಖ್ಯಾತರು, ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರ ಆತ್ಮಗೌರವ, ಸ್ವಲಿಂಗ ನಿರ್ಧಾರ ಹಾಗೂ ಸಾಂವಿಧಾನಿಕ ಹಕ್ಕನ್ನು ಎತ್ತಿ ಹಿಡಿಯುವ ಉದ್ದೇಶದಿಂದ, ಈ

ಮೇಲ್ಮನವಿ ಸಲ್ಲಿಸಲಾಗಿದೆ ಎಂದು, ಅರ್ಜಿದಾರರು ಗಮನ ಸೆಳೆದಿದ್ದು, ಸುಪ್ರೀಂ ಕೋರ್ಟ್ ಅರ್ಜಿಯನ್ನು ವಿಚಾರಣೆಗೆ, ಸ್ವೀಕರಿಸಿದೆ.

<><><>

**ಹಾಸನ ಜಿಲ್ಲೆ, ಬೇಲೂರು ತಾಲೂಕು,** ಕಣಗುಪ್ಪೆಯಲ್ಲಿ, ರೈತ ರಾಜಶೆಟ್ಟಿ ಅವರ ಸಾವಿಗೆ ಕಾರಣವಾಗಿದೆ ಎನ್ನಲಾದ, ಒಂಟಿ ಕೋರೆಯ ಕಾಡಾನೆ, ಕೆರೆಗೋಡುವಿನಲ್ಲಿ ಸೆರೆಯಾಗಿತ್ತು. ಆದರೆ, ಬಂಧನದಿಂದ ತಪ್ಪಿಸಿಕೊಂಡಿದೆ. ಇಂದು ಮತ್ತೆ ಕಾರ್ಯಾಚರಣೆ, ಮುಂದುವರಿಯಲಿದೆ.

<><><>

**ಶಿವಮೊಗ್ಗ ಜಿಲ್ಲೆ, ತ್ಯಾವರೆಕೊಪ್ಪದ, ಹುಲಿ ಮತ್ತು** ಸಿಂಹಧಾಮದ, 12 ವರ್ಷದ ಗರ್ಭಿಣಿ ನೀರಾನೆ 'ಹಂಸಿನಿ', ಸತ್ತ ಭ್ರೂಣದ ಸೋಂಕಿನಿಂದ, ಮೃತಪಟ್ಟಿದೆ.

<><><>

**ಛತ್ತೀಸ್‌ಘಡದಲ್ಲಿ ಇತ್ತೀಚೆಗೆ ನಡೆದ,** ಖೇಲೋ ಇಂಡಿಯಾ ಪ್ರಥಮ ಬುಡಕಟ್ಟು ಕ್ರೀಡಾಕೂಟದಲ್ಲಿ, ಪದಕ ವಿಜೇತ, ರಾಜ್ಯದ ಕ್ರೀಡಾಪಟುಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಸನ್ಮಾನಿಸಿ, ಶುಭ ಕೋರಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.